5. ಜನಾರೋಗ್ಯ ಶಿಲ್ಪ ಕಾರ್ಯವೃತ್ತದ ಅಧೀಕ್ಷಕ ಅಭಿಯಂತರರು ನೇಮಕ ಮಾಡಿದ ಡಿಲ್ಲರ್ಸ್ ವಂತ್ತಿತರರ ಸೇವೆಯನ್ನು ಸಕ್ರಮಗೊಳಿಸುವುದು.

ಶ್ರೀ ಬಿ. ಲಕ್ಕಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸುವ ಸಲುವಾಗಿ ರಾಜ್ಯಕ್ಕೆ ಅಗತ್ಯವಿರುವ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಕೇಂದ್ರ ಸರ್ಕಾರದಿಂದ ಪಡೆದ ಸಹಾಯಧನವನ್ನು ಉಪಯೋಗಿಸಿ ಕೊಳವೆ ಬಾವಿಗಳನ್ನು ನಿರ್ಮಿಸುವ ಸಲುವಾಗಿ ರಿಗ್‌ಗಳನ್ನು ಖರೀದಿಸಿ ಅದಕ್ಕೆ ಬೇಕಾದ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರದಿಂದ ರೋಸ್ಟರ್ ಪ್ರಕಾರ ಪಟ್ಟಿ ತರಿಸಿಕೊಂಡು, ೬ ಡ್ರಿಲ್ಲರ್ ಹುದ್ದೆಗಳು, ೩ ಅಸಿಸ್ಟೆಂಟ್ ಡ್ರಿಲ್ಲರ್ ಹುದ್ದೆಗಳು, ೩ ರಿಗ್ ಚಾಲಕರು, ೩ ರಿಗ್ ಸಹಾಯಕ ವಾಹನ ಚಾಲಕರು, ೮ ಡ್ರಿಲ್ಲಿಂಗ್ ಹೆಲ್ಪರ್ಸ್, ೭ ಕ್ಲೀನರ್ ಹುದ್ದೆಗಳು ಹಾಗೂ ೧೨ ವಾಚ್‌ಮನ್ ಹುದ್ದೆಗಳಿಗೆ ಎಸ್.ಎಂ.ಆರ್. ಆಧಾರದ ಮೇಲೆ ಬೆಂಗಳೂರಿನ ಜನಾರೋಗ್ಯ ಶಿಲ್ಪಕಾರ್ಯ ವೃತ್ತದ ಅಧೀಕ್ಷಕ ಅಭಿಯಂತರವರು ನೇಮಕಾತಿ ಮಾಡಿದ್ದು, ಆ ಪ್ರಕಾರ ಸದರಿಯವರು ದಿನಾಂಕ ೨೧-೧-೮೭ ರಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಈವರೆಗೂ ಇವರ ಸೇವೆಯನ್ನು ಸಕ್ರಮಗೊಳಿಸಿರುವುದಿಲ್ಲ,

ಈ ಹಿಂದೆ ೨೮೦ ರೂಪಾಯಿ ಮಾಸಿಕ ವೇತನದ ಮೇಲೆ ಉದ್ಯೋಗ ವಿನಿಮಯ ಕೇಂದ್ರದಿಂದ ನೇಮಿಸಿಕೊಳ್ಳಲಾದ ೯ ಅಸಿಸ್ಟೆಂಟ್ ಡ್ರಿಲ್ಲರ್‌ಗಳ ಸೇವೆಯನ್ನು ೭-೪-೮೮ ರಂದು ೧೯೮೮ರ ವಿಶೇಷ ನಿಯಮಾವಳಿಗಳ ಪ್ರಕಾರ ಸಕ್ರಮವಾಗಿ ಕ್ರಮಬದ್ಧಗೊಳಿಸಲು ನಿರ್ದೇಶಿಸಿರುತ್ತಾರೆ. ಅದೇ ರೀತಿಯಲ್ಲಿಯೇ ಮೇಲೆ ತಿಳಿಸಿದ ಹುದ್ದೆಗಳಲ್ಲಿರುವವರ ಸೇವೆಯನ್ನು ಸಹ ಕ್ರಮಬದ್ಧಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹಾಗೂ ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿಕೆ ನೀಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಹೇಳಿಕೆಯನ್ನು ತರಿಸಿ ಆದಷ್ಟು ಬೇಗ ಕಳುಹಿಸಿಕೊಡುತ್ತೇನೆ.

6. ಗಲಗಲಿಯಲ್ಲಿ ದಿನಾಂಕ 21-5-88 ರಂದು ನಡೆದ ಕೋಮು ಗಲಭೆಯಲ್ಲಿ ಹಿಂಸೆಗೊಳಗಾದವರಿಗೆ ಪರಿಹಾರ ನೀಡಲು ಒತ್ತಾಯ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಒಂದು ದೊಡ್ಡ ಗ್ರಾಮವಾದ ಮತ್ತು ಕೇಂದ್ರವಾದ ಗಲಗಲಿಯಲ್ಲಿ ದಿನಾಂಕ ೨೧-೫-೮೮ ರಂದು ಕೋಮು ಗಲಭೆ ಸಂಭವಿಸಿದ್ದು, ಈ ಘಟನೆಯಲ್ಲಿ ಹಲವಾರು ಜನರು ಗಾಯಗೊಂಡಿದ್ದು, ಸುಮಾರು ೨೦-೨೫ ಅಂಗಡಿಗಳನ್ನು ಲೂಟಿ ಮಾಡಲಾಗಿದೆ, ಮಹಾರಾಷ್ಟ್ರದಿಂದ ಬಂದ ಹಿಂದೂ ಮಹಾಸಭೆಯ ಮುಖಂಡರೊಬ್ಬರು ಕೋಮು ಭಾವನೆಗಳನ್ನು ಪ್ರಚೋದಿಸುವ ಭಾಷಣ ಮಾಡಿದ್ದರಿಂದ ಪರಿಣಾಮ ಅಲ್ಲಿ ಎಂದೂ ಇಲ್ಲದ ಜಾತೀಯ ಗಲಭೆಗೆ ಕಾರಣವಾಯಿತು. ಕಳೆದ ಹಲವಾರು ತಿಂಗಳಿಂದ ಆ ಗ್ರಾಮದಲ್ಲಿ ಕೋಮು ಸೌಹಾರ್ದ ವಿರುದ್ಧ ವಾತಾವರಣ ನಿರ್ಮಾಣವಾಗುತ್ತಿದ್ದರೂ ಪೋಲೀಸ್ ಅಧಿಕಾರಿಗಳು ಭಾಷಣ ಮಾಡಲು ಅನುಮತಿ ಕೊಟ್ಟಿದ್ದೇಕೆ?

ಗಲಭೆಗಳೆಲ್ಲ ಮುಗಿದ ಮೇಲೆ ಅಲ್ಲಿಗೆ ಪೋಲೀಸರು ಬಂದರು. ಸುಮಾರು ೪೦ ಜನರನ್ನು ಬಂಧಿಸಲಾಗಿದೆ ಆತ್ಯಂತ ಖಂಡನೀಯ ವಿಚಾರವೆಂದರೆ, ಒಬ್ಬ ಕಿತಾಪತಿ ಮಾಡುವ ಸ್ಥಳೀಯ ಮುಖಂಡನ ಮಾತು ಕೇಳಿ ಪೋಲೀಸರು ಅವನು ಬೇಳು ಮಾಡಿ ತೋರಿಸಿದ ಸಮ್ಮ ಪಕ್ಷದ ಅನೇಕ ಕಾರ್ಯಕರ್ತರನ್ನು ಬಂಧಿಸಿ ಅಮಾನುಷವಾದ ಹಿಂಸೆ ಕೊಟ್ಟಿದ್ದಾರೆ, ಊರಿನ ಜನಪ್ರಿಯ ಖಾಸಗಿ ವೈದ್ಯ ಡಾ॥ ವಿಜಯಾಹಿಪ್ಪರಗಿ ಮತ್ತು ಅವರ ಮೂವರು ಸೋದರರನ್ನು ಬಂಧಿಸಲಾಗಿದೆ. ಜನತಾ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾದ ಯುವ ನಾಥ ಜೋಷಿ, ಪ್ರಕಾಶ ಜೋಷಿ, ಮತ್ತು ಅಲ್ಲಿಯ ಬಸವ ಬಳಗದ ಸದಸ್ಯರನ್ನು ಬಂಧಿಸಲಾಗಿದೆ, ರಾಮಚಂದ್ರ ಪವಾರ್ ಎಂಬ ನಿಷ್ಠಾವಂತ ಕಾರ್ಯಕರ್ತನ ಮತ್ತು ಅವನ ಮಿತ್ರರನ್ನು ಮಾನಸಪುತ್ರರಾಗಿ ಹೊಡೆದಿದ್ದು ನಮ್ಮ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಶ್ರೀ ಪತಿ ಜಾಧವ ಪತ್ನಿ ಅವರ ಮಗ ಪೂಜಾರಿಯನ್ನು ಅಮಾನುಷವಾಗಿ ಹೊಡೆದಿದ್ದು ಪೆಟ್ಟು ತಿಂದ ಮೋಹನನ್ನು ಬಂಧಿಸಲಾಗಿದೆ ಪೋಲೀಸರ ದಬ್ಬಾಳಿಕೆಗೆ ಅಂಜಿ ಹಲವಾರು ಜನರು ಊರು